NAME OF THE NEWS PAPER : DATE :

ಆಡಳಿತ–ಪ್ರತಿಪಕ್ಷ ನಾಯಕರ ನಡುವೆ ಗದ್ದಲ–ಗಲಾಟೆ। ಅನುದಾನ ತಡೆ ಹಿಡಿಯಲು ಹಿಂದಿನ ಸರಕಾರದ ಅವೈಜ್ಞಾನಿಕ ಕ್ರಮವೇ ಕಾರಣ:

# ಅನುದಾನ ಹಂಚಿಕೆಯಲ್ಲಿ ತಾಕತ್ತು ಮಾತು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಕಾಂಗ್ರೆಸ್–ಜೆಡಿಎಸ್ ಶಾಸಕರ ಕ್ಷೇತ್ರದ ಅನುದಾನ ತಡೆಹಿಡಿಯಲಾಗಿದೆ ಎನ್ನುವ ಮಾತು, ಗುರುವಾರ ಕಾರ್ಯಕಲಾಪದಲ್ಲಿ ಭಾರಿ ಸದ್ದು ಮಾಡಿತು.

ರಾಜ್ಯಪಾಲ ಭಾಷಣದ ಮೇಲೆ ಚರ್ಚೆ ವೇಳೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು, ಇಂದಿನ ಸರಕಾರ, ಹಿಂದಿನ ಸರಕಾರ ನೀಡಿರುವ ಅನುದಾನ ತಡೆಹಿಡಿದಿದೆ. ಕೂಡಲೇ ಇದನ್ನು ತೆರವುಗೊಳಿಸಿ, ಟೆಂಡರ್ ಆಗಿರುವ, ಆರ್ಥಿಕ ಇಲಾಖೆಯಲ್ಲಿ ಅನುಮೋದನೆ ದೊರೆತಿರುವ ಕಾಮಗಾರಿಗೆ ಅನುದಾನ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಈ ವಿಚಾರ ಪ್ರಸ್ತಾಪಿಸುತ್ತಿದ್ದಂತೆ, ಕಾಂಗ್ರೆಸ್–ಜೆಡಿಎಸ್ ಶಾಸಕರು ನಮ್ಮ ಅನುದಾನವನ್ನು ಕಡಿತಗೊಳಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ನಿಮ್ಮ ಶಾಸಕರಿಗೆ ಬೇಕಿದ್ದರೆ ಹೆಚ್ಚುವರಿ ಅನುದಾನ ನೀಡಿ, ಆದರೆ ಈಗಾಗಲೇ ಯೋಜನೆಗೆ ಬಿಡುಗಡೆಯಾಗಿರುವ ಅನುದಾನವನ್ನು ಏಕೆ ತಡೆಹಿಡಿಯುತ್ತೀರಿ? ದ್ವೇಷದ ರಾಜಕಾರಣ ಮಾಡುವುದಿಲ್ಲ ಎನ್ನುವ ಮುಖ್ಯಮಂತ್ರಿಗಳು ಈಗ ಮಾಡುತ್ತಿರುವುದಾದರೂ ಏನು ಎಂದು ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಸಿದ್ದರಾಮಯ್ಯ, ನಮ್ಮ ಸರಕಾರದ ಅವಧಿಯಲ್ಲಿ ಈ ರೀತಿ ನಡೆದಿರಲಿಲ್ಲ. ಎಲ್ಲ ಶಾಸಕರಿಗೂ ಅನುದಾನ ಬಿಡುಗಡೆ ಮಾಡಿದ್ದೇವೆ. ಅದರಲ್ಲಿಯೂ ಘೋಷಣೆಯಾದ, ಕಾಮಗಾರಿ ಆರಂಭಗೊಂಡಿರುವ ಯೋಜನೆಗಳಿಗೆ ಎಂದಿಗೂ ಅನುದಾನ ವಾಪಸ್ ಪಡೆದಿರಲಿಲ್ಲ. ಮುಖ್ಯಮಂತ್ರಿಗಳ ಈ ನಿರ್ಧಾರದಿಂದ ಗುತ್ತಿಗೆದಾರರು ನೇಣುಹಾಕಿಕೊಳ್ಳುವ ಪರಿಸ್ಥಿತಿ ಎದುರಾಗಿದೆ. ಒಂದು ವೇಳೆ ಹಣಕಾಸಿನ ಇತಿಮಿತಿಯಿದ್ದರೆ, ಟೆಂಡರ್ ಆಗದಿರುವ ಯೋಜನೆಗಳಿಗೆ ತಡೆಹಿಡಿಯಿರಿ. ಆದರೆ ಈಗಾಗಲೇ ಆರಂಭವಾಗಿರುವ ಕಾಮಗಾರಿಗಳ ಅನುದಾನ ತಡೆಯುವುದು ಸರಿಯಲ್ಲ ಎಂದು ಟೀಕಿಸಿದರು.

ಈ ವೇಳೆ ಬಿಜೆಪಿ ಶಾಸಕರು ಕಳೆದ ಆರು ವರ್ಷದಿಂದ ನಮಗಾದ ಸಮಸ್ಯೆಯ ಬಗ್ಗೆ ... ಸಮ್ಮಿಶ್ರ ಸರಕಾರದ ಅವಧಿಯಲ್ಲಿ ... ಸಿಗಲಿಲ್ಲ. ಆ ಸಮಸ್ಯೆ ಯಾರಿಗೆ ... ನಮಗೆ ಅನುದಾನ ಕೊಟ್ಟರೆ ... ತಾಕತ್ತಿದ್ದರೆ ನೀವು ಅನುದಾನವನ್ನು ... ಎಂದು ಸವಾಲು ಹಾಕಿದರು.

**ನನ್ನ ಕ್ಷೇತ್ರದ ಅನುದಾನವನ್ನು ವಾಪಸ್** ...

ಬಿಜೆಪಿ ನಾಯಕರು ಈ ಮಾತು ... ಬಿಜೆಪಿಯ ಶಾಸಕರು ಸಿದ್ದರಾಮಯ್ಯ ... ಬಾದಾಮಿಗೆ ಆರು ನೂರು ಕೋಟಿ ಅ... ಎಂದು ಹೇಳಿದರು. ಇದಕ್ಕೆ ... ಸಿದ್ದರಾಮಯ್ಯ, ನನ್ನ ಕ್ಷೇತ್ರಕ್ಕೆ ಅನುದಾನ ... ವುದು ನನ್ನ ಹಕ್ಕು. ಒಂದು ವೇಳೆ ಕೊಟ್ಟಿರು... ನೀಡದಿದ್ದರೆ ಅದನ್ನು ವಾಪಸ್ ಪಡೆಯಿ...



## ಕರ ಸಂಗ್ರಹ ಕುಸಿತ: ಆದಾಯ ₹21 ಸಾವಿರ ಕೋಟಿ ಖೋತಾ

## ಸದನದಲ್ಲಿ ವಿಶ್ವವಾಣಿ ವರದಿ ಪ್ರಸ್ತಾಪ

ದೇಶದ ಆರ್ಥಿಕ ಕುಸಿತ ಹಿನ್ನೆಲೆಯಲ್ಲಿ 'ಕರ ಸಂಗ್ರಹ ಕುಸಿತ: ಆದಾಯ 21 ಸಾವಿರ ಕೋಟಿ ಖೋತಾ' ಶೀರ್ಷಿಕೆಯಡಿ 'ವಿಶ್ವವಾಣಿ'ಯಲ್ಲಿ ಫೆ.18ರಂದು ಪ್ರಕಟವಾದ ವರದಿ ಕುರಿತು ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಸ್ತಾಪಿಸಿದರು. ರಾಜ್ಯದ ಆರ್ಥಿಕ ಪರಿಸ್ಥಿತಿ ಕುರಿತು ವರದಿಯು ವಿಧಾನಸಭೆಯಲ್ಲಿ ಪ್ರತಿಧ್ವನಿಸಿತು. ಸರಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ವರದಿಯಲ್ಲಿ ಕೆಲವೊಂದು ಅಂಶಗಳನ್ನು ಉಲ್ಲೇಖ ಮಾಡಿ ಸದನದ ಗಮನ ಸೆಳೆದರು.

## ಹಿಂದಿನ ಸರಕಾರದಿಂದ ನಮಗೆ ಸಮಸ್ಯೆ

ಇನ್ನು ಪ್ರತಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ... ಎಲ್ಲ ಇಲಾಖೆ ಬಗ್ಗೆ ಮಾತನಾಡುವುದಿಲ್ಲ. ಆದರೆ ಲೋಕೋಪಯೋಗಿ ಇಲಾಖೆಯಲ್ಲಿ ನೋಡು... **2019–20ನೇ ಸಾಲಿನಲ್ಲಿ 59,112 ಕೋಟಿ ಯೋಜನೆಗೆ ಒಪ್ಪಿಗೆ ನೀಡಲಾಗಿದ್ದು, 36,000** ... ವೆಚ್ಚದ ಕಾಮಗಾರಿಗಳು ನಡೆಯುತ್ತಿದೆ. ಆದರೆ **9,450** ಕೋಟಿ ರು. ಅನುದಾನ ಮಾತ್ರ ... ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ. ಆರ್ಥಿಕ ಇಲಾಖೆ ಒಪ್ಪಿಗೆ ಇಲ್ಲದಿರುವ ಕೆಲವು ಯೋ... ನೀಡಲಾಗಿದೆ. ಇದರೊಂದಿಗೆ ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿ ಎದುರಾದ ಹಿನ್ನೆಲೆಯಲ್ಲಿ ... ಸ್ಥಗಿತಗೊಂಡಿದೆ ಎಂದು ಸರಕಾರದ ನಡೆಯನ್ನು ಸಮರ್ಥಿಸಿಕೊಂಡರು.

> ಕಾಂಗ್ರೆಸ್–ಜೆಡಿಎಸ್ ಶಾಸಕರಿಗೆ ಅನುದಾನ ಕಡಿತಗೊಳಿಸಿರುವುದಕ್ಕೆ ಆರ್ಥಿಕ ಇಲಾಖೆ ಸಮಸ್ಯೆ, ಪ್ರವಾಹ ಪರಿಸ್ಥಿತಿ ಎನ್ನುತ್ತೀರಾ. ಆದರೆ ಉಪಚುನಾವಣೆಯಲ್ಲಿ 13 ಕ್ಷೇತ್ರಗಳಿಗೆ 190 ಕೋಟಿ ನೀಡುವುದಕ್ಕೆ ಸಾಧ್ಯವಾಯಿತೇ?
>
> **– ಸಿದ್ದರಾಮಯ್ಯ** ಪ್ರತಿಪಕ್ಷ ನಾಯಕ